**CC 1598/2018**

**ಪ್ರಧಾನ ದಿವಾಣಿ ನ್ಯಾಯಾಧೀಶರು ಮತ್ತು ಪ್ರ.ದ.ನ್ಯಾ.ದಂ. ಗಳ ನ್ಯಾಯಾಲಯ, ಹೊಸಪೇಟೆ.**

**ಸಿಸಿ ನಂಬರ್ 1598/2018**

**ಡಿ ಡಬ್ಲೂ - 1**

| | |
|---|---|
| **ಸಾಕ್ಷಿಯ ಹೆಸರು -** | **ಕೆ ಹೆಚ್ ಪ್ರಕಾಶ** |
| **ತಂದೆಯ ಹೆಸರು -** | **ಹನುಮಂತ ಶೆಟ್ಟಿ** |
| **ವಯಸ್ಸು -** | **55 ವರ್ಷಗಳು** |
| **ಉದ್ಯೋಗ -** | **ಶಿಕ್ಷಕ** |
| **ವಾಸಸ್ಥಳ -** | **ಹುಲಿಯೂರು ದುರ್ಗ, ತಾಃ ಕುಣಿಗಲ್** |

**ಸಾಕ್ಷಿಯನ್ನು ದಿನಾಂಕಃ 23-11-2024 ರಂದು ಪ್ರಾಮಾಣೀಕರಿಸಲಾಯಿತು.**

**ಮುಖ್ಯ ವಿಚಾರಣೆಃ ಆರೋಪಿ ಪರ ಶ್ರೀ ಇ ವಿ ಎ ಜಿ., ವಕೀಲರಿಂದ**

ನಾನು ಪಿರ್ಯಾದುದಾರರ ಬಳಿ ಯಾವುದೇ ಸಾಲ ಪಡೆದಿರಲಿಲ್ಲ. ನಾನು ಮತ್ತು ಪಿರ್ಯಾದುದಾರ ಕುಣಿಗಲ್ ತಾಲ್ಲೂಕಿನಲ್ಲಿ ಒಂದೇ ಕಡೆ ಕೆಲಸ ಮಾಡುತ್ತಿದ್ದೇವು. ಕುಣಿಗಲ್ ಪಟ್ಟಣದ ಗೌಡ್ರು ಎಂಬ ವ್ಯಕ್ತಿ ಶಿಕ್ಷಕರಿಗೆ ಸಾಲ ಕೊಡುತ್ತಿದ್ದರು. ನಾನು ಸದರಿಯವರ ಬಳಿ ಸಾಲ ಪೆಡದಿದ್ದೆ. ಪಿರ್ಯಾದುದಾರರು ಸಹ ಸದರಿ ಗೌಡ್ರು ರವರ ಬಳಿ ಸಾಲ ಪಡೆದಿದ್ದರು. ಪಿರ್ಯಾದುದಾರರು ವರ್ಗಾವಣೆ ಆಗಿದ್ದರಿಂದ ಹೊಸಪೇಟೆಗೆ ಬಂದಿರುತ್ತಾರೆ. ಸದರಿ ಗೌಡ್ರು ರವರ ಬಳಿ ಮಾಡಿದ್ದ ಇಬ್ಬರ ಸಾಲವನ್ನು ನಾನು ತೀರಿಸಿರುತ್ತೇನೆ. ಪಿರ್ಯಾದುದಾರ ತಾನು ಸಾಲ ತೀರಿಸಿರುವುದಾಗಿ ಸದರಿ ಗೌಡ್ರು ರವರ ಬಳಿ ಹೇಳಿ ನಾನು ನೀಡಿದ್ದ ಚೆಕ್ ನ್ನು ತೆಗೆದುಕೊಂಡು ಬಂದಿರುತ್ತಾರೆ. ಸದರಿ ಗೌಡ್ರು ರವರು ಈ ಬಗ್ಗೆ ಸಾಕ್ಷ್ಯ ನುಡಿಯಲು ನ್ಯಾಯಾಲಯಕ್ಕೆ ಬರುತ್ತೇನೆ ಎಂದು ತಿಳಿಸಿದ್ದರು. 1 ತಿಂಗಳು ಹಿಂದೆ ಸದರಿಯವರು ಮೃತ ಪಟ್ಟಿರುತ್ತಾರೆ. ಸದರಿ ಗೌಡ್ರು ರವರು ಕೊನೆಯ ಬಾರಿ ಪಿರ್ಯಾದುದಾರರೊಂದಿಗೆ ಮಾತನಾಡಿದಾಗ ಚೆಕ್ ಏಕೆ ದುರುಪಯೋಗಪಡಿಸಿಕೊಂಡೆ ಎಂದು ಕೇಳಿರುತ್ತಾರೆ. ಪಿರ್ಯಾದುದಾ ನಾನು ಹಣ ಕೊಡುವುದಿದೆ ಎಂದು ಸದರಿಯವರಿಗೆ ಉತ್ತರ ನೀಡಿರುತ್ತಾನೆ.

**CC 1598/2018**

**ಡಿ ಡಬ್ಲೂ - 1**

ಸದರಿ ವ್ಯಕ್ತಿ ತೀರಿಕೊಂಡಿದ್ದರಿಂದ ನಾನು ಆತನನ್ನು ಕರೆದುಕೊಂಡು ಬರಲು ಆಗಲಿಲ್ಲ. ತಿಂಗಳ ಸಂಬಳದಲ್ಲಿ ರೂ. 6,500/- ಗಳನ್ನು ಕಡಿತ ಮಾಡಿಸಿ ನಾನು ಸಾಲದ ಮೊತ್ತವನ್ನು ಸದರಿ ಗೌಡ್ರು ರವರಿಗೆ ಹಿಂತಿರುಗಿಸಿರುತ್ತೇನೆ. ನಾನು ಆ ರೀತಿ ಸಾಲ ತೀರಿಸಿದ್ದರೂ ಸಹ ಪಿರ್ಯಾದುದಾರ ತಾನೇ ಸಾಲ ತೀರಿಸಿರುವುದಾಗಿ ಸುಳ್ಳು ಹೇಳಿ ಈ ಪ್ರಕರಣವನ್ನು ದಾಖಲಿಸಿರುತ್ತಾನೆ. ನಾನು ಪಿರ್ಯಾದುದಾರರಿಂದ ವೈಯಕ್ತಿಕವಾಗಿ ಯಾವುದೇ ಸಾಲ ಪಡೆದಿರುವುದಿಲ್ಲ.

**ಆದ್ದರಿಂದ, ನನ್ನನ್ನು ಪ್ರಕರಣದಿಂದ ಖುಲಾಸೆಗೊಳಿಸಬೇಕೆಂದು ಕೇಳಿಕೊಳ್ಳುತ್ತೇನೆ.**

**ಪಾಟೀ ಸವಾಲುಃ ಪಿರ್ಯಾದುದಾರರ ಪರ ವಕೀಲರಿಂದ**

**ಪಿರ್ಯಾದುದಾರರ ಪರ ವಕೀಲರು ಪಾಟೀ ಸವಾಲಿಗಾಗಿ ಸಮಯ ಕೋರಿದ್ದು, ಮುಂದೂಡಲಾಯಿತು.**

(ನನ್ನ ಉಕ್ತಲೇಖನದಂತೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು.)

ಓ. ಹೆ. ಕೇ. ಸರಿ ಇದೆ.

ಪ್ರಧಾನ ದಿವಾಣಿ ನ್ಯಾಯಾಧೀಶರು
ಹಾಗೂ ಜೆ.ಎಂ.ಎಫ್.ಸಿ., ಹೊಸಪೇಟೆ.